# ಜಿಲ್ಲಾ ಪಂಚಾಯತ್, ಚಿತ್ರದುರ್ಗ
# (ರೇಷ್ಮೆ ಇಲಾಖೆ)

## ರೇಷ್ಮೆ ಉಪ ನಿರ್ದೇಶಕರ ಕಛೇರಿ,
## ಜಿಲ್ಲಾ ಪಂಚಾಯತ್, ಚಿತ್ರದುರ್ಗ

## ಮಾಹಿತಿ ಹಕ್ಕು ಅಧಿನಿಯಮ-2005ರ
## ಸೆಕ್ಷನ್ 4(1)(ಬಿ) ಆಧಾರಿತ ಮಾಹಿತಿ ಕೈಪಿಡಿ

# 2022–23

**4(1)(ಬಿ)(i) ಇಲಾಖೆಯ ಸಂಘಟನೆ, ಚಟುವಟಿಕೆಗಳು ಮತ್ತು ಕರ್ತವ್ಯಗಳ ವಿವರಗಳು.**

ರೇಷ್ಮೆ ಉಪನಿರ್ದೇಶಕರ ಕಾರ್ಯಾಲಯದ ಸಂಘಟನೆ ಮತ್ತು ಇಲಾಖೆಯ ಚಟುವಟಿಕೆಗಳು.

**ಸಂಘಟನೆ:–**

ರೇಷ್ಮೆ ಇಲಾಖೆಯು ಜಿಲ್ಲೆಯಲ್ಲಿ ರೇಷ್ಮೆ ಚಟುಟಿಕೆಗಳ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದೆ. ರೇಷ್ಮೆ ಉಪನಿರ್ದೇಶಕರ ನೇತೃತ್ವದಲ್ಲಿ ಇಲಾಖೆಯ ಇವಿಧ ವೃಂದದ ತಾಂತ್ರಿಕ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ರೇಷ್ಮೆ ಕೃಷಿ ಅಭಿವೃದ್ಧಿಯ ವಿವಿಧ ಹಂತಗಳಲ್ಲಿ ಕಾರ್ಯನಿರ್ವಹಿಸುತ್ತಾರೆ. ಇಲಾಖೆಯ ತಾಂತ್ರಿಕ ವಿಭಾಗ ಮತ್ತು ಆಡಳಿತ ವಿಭಾಗ ರೇಷ್ಮೆ ಉಪನಿರ್ದೇಶಕರ ಮಾರ್ಗದರ್ಶನದಲ್ಲಿ ಇಲಾಖೆಯ ವಿವಿಧ ಚಟುವಟಿಕೆಗಳನ್ನು ನಿರ್ವಹಿಸುತ್ತದೆ. ಕ್ಷೇತ್ರ ಮಟ್ಟದಲ್ಲಿ ವಿವಿಧ ವೃಂದದ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ ವಿಸ್ತರ್ಣಾಕಾರ್ಯವನ್ನು ನಿರ್ವಹಿಸುತ್ತಾರೆ. ಇಲಾಖೆಯ ಸಿಬ್ಬಂದಿ ವರ್ಗಗಳ ಸಂಘಟನೆಯ ವಿವರಗಳನ್ನು ತೋರಿಸುವ ತಃಖ್ತೆಯನ್ನು ಮುಂದಿನ ಪುಟಗಳಲ್ಲಿ ತೋರಿಸಲಾಗಿದೆ. ಈ ಕಾರ್ಯಾಲಯದಲ್ಲಿ ಈಗ 11 ಮಂಜೂರಾದ ವಿವಿಧ ವೃಂದದ ಹುದ್ದೆಗಳಿದ್ದು 3 ಸಿಬ್ಬಂದಿ ವರ್ಗದವರು ಕಾರ್ಯನಿರ್ವಹಿಸುತ್ತಿದ್ದಾರೆ.

**ಇಲಾಖೆಯ ಕರ್ತವ್ಯಗಳು ಮತ್ತು ಕಾರ್ಯ ಚಟುವಟಿಕೆಗಳು:–**

ಇಲಾಖೆಯು ಜಿಲ್ಲೆಯಲ್ಲಿ ರೇಷ್ಮೆ ಕೃಷಿ ಚಟುವಟಿಕೆಗಳ ಅಭಿವೃದ್ಧಿಗಾಗಿ ಕೆಳಕಂಡ ಮುಖ್ಯ ಸೇವೆಗಳನ್ನು ಒದಗಿಸುತ್ತಿದೆ.

1. ರೇಷ್ಮೆ ಕೃಷಿ ಚಟುವಟಿಕೆಗಳಾದ ಹಿಪ್ಪುನೇರಳೆ ವ್ಯವಸಾಯ, ರೇಷ್ಮೆ ಹುಳು ಸಾಕಾಣಿಕೆ ಇತ್ಯಾದಿಗಳ ಬಗ್ಗೆ ತಾಂತ್ರಿಕ ಮಾರ್ಗದರ್ಶನ ನೀಡುವುದು ಮತ್ತು ತರಬೇತಿ ಒದಗಿಸುವುದು.
2. ಅಧಿಕ ಇಳುವರಿ ನೀಡುವ ಹಿಪ್ಪುನೇರಳೆ ಮತ್ತು ರೇಷ್ಮೆ ಹುಳುವಿನ ತಳಿಗಳನ್ನು ರೈತರಿಗೆ ಒದಗಿಸುವುದು.
3. ರೇಷ್ಮೆ ಬೆಳೆಗಾರರಿಗೆ ವಿಸ್ತರಣೆ, ಚಾಕಿ ಸಾಕಣೆ ಮತ್ತು ರೋಗ ನಿಯಂತ್ರಣ ಸೌಲಭ್ಯಗಳನ್ನು ಒದಗಿಸುವುದು.
4. ರೇಷ್ಮೆ ಚಟುವಟಿಕೆಗಳಿಗಾಗಿ ಬ್ಯಾಂಕುಗಳಿಂದ ಸಾಲ ಸೌಲಭ್ಯ ಪಡೆಯಲು ರೈತರಿಗೆ ಸಹಾಯ ಮಾಡುವುದು.
5. ರೇಷ್ಮೆ ಗೂಡು ಮಾರಾಟಕ್ಕೆ ವ್ಯವಸ್ಥೆ ಕಲ್ಪಿಸುವುದು.
6. ರೇಷ್ಮೆ ಬೆಳೆಗಾರರಿಗೆ ಹೊಸತಾಂತ್ರಿಕತೆಗಳನ್ನು ಅಳವಡಿಸಿ ಉತ್ಪಾದನೆ ಮತ್ತು ಗುಣಮಟ್ಟ ಹೆಚ್ಚಿಸಿ ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಲು ಪ್ರೇರೆಪಿಸುವುದು.

**4(1)(ಬಿ)(ii) ಅಧಿಕಾರಿಗಳು ಮತ್ತು ಸಿಬ್ಬಂದಿಯ ಅಧಿಕಾರ ಮತ್ತು ಕರ್ತವ್ಯಗಳು**

**ಅಧಿಕಾರಗಳು :-**

ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಐ 267 ಎಸ್.ಎಲ್.ಎಸ್ 79 ದಿ 1-6-1981 ರಲ್ಲಿ ಹೊರಡಿಸಿರುವ ಅಧಿಕಾರ ಪ್ರತ್ಯಾಯೋಜನೆ, ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ03 ಟಿಎಫ್‌ಪಿ 2018 ದಿ 14-5-2018. ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ನಿಯಮ 1999 ಮತ್ತು 2000 ಗಳನ್ವಯ ಕಾರ್ಯನಿರ್ವಹಿಸಲಾಗುವುದು.

**ಕರ್ತವ್ಯಗಳು:-**

1. **ರೇಷ್ಮೆ ಉಪನಿರ್ದೇಶಕರು:-**

ಜಿಲ್ಲೆಗೆ ಸಂಬಂಧಿಸಿದ ಕ್ರಿಯಾ ಯೋಜನೆ ರೂಪಿಸುವುದು ಮತ್ತು ಅದರ ಯಶಸ್ವಿ ಅನುಷ್ಠಾನಗೊಳಿಸಿ ನಿಗದಿಪಡಿಸಿದ ಗುರಿಗಳನ್ನು ಸಾಧಿಸುವುದು. ರೋಗ ನಿಯಂತ್ರಣ ಕ್ರಮಗಳನ್ನು ಕೈಗೊಳುವುದು. ಅಧಿನ ಸಂಸ್ಥೆಗಳ ಕಾರ್ಯಕ್ರಮಗಳ ಪರಿಶೀಲನೆ ಮತ್ತು ಉಸ್ತುವಾರಿ ನಡೆಸುವುದು ವ್ಯಾಪ್ತಿ ಮೀರಿದ ಪ್ರಕರಣಗಳಲ್ಲಿ ಹಿರಿಯ ಅಧಿಕಾರಿಗಳ ಗಮನಕ್ಕೆ ತರುವುದು.

2. **ರೇಷ್ಮೆ ಸಹಾಯಕ ನಿರ್ದೇಶಕರು ವಿಭಾಗಿಯ :-**

ಯೋಜನೆಗಳ ಅನುಷ್ಠಾನ, ಖಾಸಗಿ ಚಾಕಿ ಸಾಕಾಣಿಕೆ ಕೇಂದ್ರಗಳ ನಿಯಂತ್ರಣ, ಪ್ರತ್ಯಾಯೋಜನೆ ಮೇರೆಗೆ ಅವರ ವ್ಯಾಪ್ತಿಗೆ ಬರುವ ಸಹಾಯಧನ ಸೌಲಭ್ಯಗಳ ಮಂಜೂರಾತಿ.

(1) ಕಛೇರಿಯ ಮುಖ್ಯಾಧಿಕಾರಿಗಳಿಗೆ ಆಡಳಿತಾತ್ಮಕ ಹಾಗೂ ಲೆಕ್ಕ ಪತ್ರ ವಿಷಯಗಳಿಗೆ ಸಹಾಯಕರಾಗಿ ಕಾರ್ಯನಿರ್ವಹಿಸುವುದರೊಂದಿಗೆ ಕಛೇರಿಯ ವ್ಯಾಪ್ತಿಯಲ್ಲಿ ಬರುವ ಸಂಸ್ಥೆಗಳ ಆಡಳಿತ, ಲೆಕ್ಕ ಪತ್ರ ಹಾಗೂ ಲೆಕ್ಕ ತಪಾಸಣೆ.

(2) ಹಣಸೆಳೆಯುವ ಹಾಗೂ ಬಟವಡೆ ಅಧಿಕಾರಿಯಾಗಿ ಕಾರ್ಯನಿರ್ವಹಣೆ.

(3) ನ್ಯಾಯಾಲಯ ಪ್ರಕರಣ ಹಾಗೂ ಕಛೇರಿ ಮುಖ್ಯಸ್ಥರಿಗೆ ಆಡಳಿತ ಹಾಗೂ ಹಣಕಾಸಿನ ವಿಷಯದಲ್ಲಿ ಸಹಕಾರ ನೀಡುವುದು.

3. **ಕಛೇರಿ ಅಧೀಕ್ಷಕರು :-**

ಆಯವ್ಯಯ ತಯಾರಿಕೆ, ಆಡಳಿತ ಮತ್ತು ಲೆಕ್ಕ ಶಾಖೆಯ ಮೇಲುಸ್ತುವಾರಿ.

4. **ರೇಷ್ಮೆ ನಿರೀಕ್ಷಕರು :-**

ಅಧೀನ ಸಂಸ್ಥೆಗಳಿಂದ ಈ ಕಾರ್ಯಲಯದಲ್ಲಿ ಸ್ವೀಕೃತವಾಗುವ ವಿವಿಧ ಯೋಜನೆಗಳ ಪ್ರಸ್ತಾವನೆಗಳ ಪರಿಶೀಲನೆ ಹಾಗೂ ಆಡಳಿತಾತ್ಮಕ / ತಾಂತ್ರಿಕ ಮಂಜೂರಾತಿಗಾಗಿ ಕಡತಗಳನ್ನು ಮಂಡಿಸುವುದು.

5. **ಪ್ರಥಮ ದರ್ಜೆ ಸಹಾಯಕರು/ದ್ವಿತಿಯ ದರ್ಜೆ ಸಹಾಯಕರು :-**

ಈ ಕಾರ್ಯಾಲಯದ ಹಾಗೂ ಅಧೀನ ಸಂಸ್ಥೆಗಳಿಂದ ಆಡಳಿತಾತ್ಮಕ ವಿಷಯಗಳಲ್ಲಿ ಸ್ವೀಕೃತವಾಗುವ ಕಡತಗಳ ಮಂಡನೆ ಡಿ.ಸಿ ಹುಂಡಿ, ಪ್ರವಾಸ ಭತ್ಯೆ ಬಿಲ್ ಮೇಲು ಸಹಿ ಇತ್ಯಾದಿ.

6. **ಬೆರಳಚ್ಚುಗಾರರು:-**

ಕಾರ್ಯಾಲಯದಲ್ಲಿ ಬೆರಳಚ್ಚುಕಾರ್ಯ ನಿರ್ವಹಿಸುವುದು.

7. **ವಾಹನ ಚಾಲಕರು :-**

ಅಧಿಕಾರಿಗಳ ವಾಹನ ಚಾಲನೆ.

8. **'ಡ' ವರ್ಗದ ನೌಕರ:-**

ಮೇಲಾಧಿಕಾರಿಗಳ ನಿರ್ದೇಶನದಂತೆ ಕಛೇರಿ ಕಾರ್ಯನಿರ್ವಹಿಸುವುದು.

**4(1)(ಬಿ)(iii) ಉತ್ತರದಾಯಿತ್ವ ಮತ್ತು ಮೇಲ್ವಿಚಾರಕ ಸಹಿತ, ನಿರ್ಧರಣಾ ಪ್ರಕ್ರಿಯೆಯಲ್ಲಿ ಅನುಸರಿಸುವ ವಿಧಿವಿಧಾನಗಳು.**

**ರೇಷ್ಮೆ ಉಪನಿರ್ದೇಶಕರು ಜಿಲ್ಲಾ ಪಂಚಾಯತ್ ಚಿತ್ರದುರ್ಗ ರವರ ವಿತ್ತೀಯ ಪ್ರಾಧಿಕಾರ**

ಫಲಾನುಭವಿ ಆಧಾರಿತ ಕಾರ್ಯಕ್ರಮಗಳಿಗೆ ರೂ 25,000/- ರಿಂದ 1,00,000/- ವರೆಗೆ (ಪ್ರತಿ ಪ್ರಕರಣಕ್ಕೆ) ಸಹಾಯಧನ/ ಪ್ರೋತ್ಸಾಹಧನ ಮಂಜೂರಾತಿ ನೀಡುವುದು.

**4(1)(ಬಿ)(iv) ಇಲಾಖೆಯ ಕಾರ್ಯನಿರ್ವಹಣೆಯಲ್ಲಿ ಅನುಸರಿಸುವ ನಿಯಮಗಳು**

ಇಲಾಖೆಯ ಆಡಳಿತಾತ್ಮಕ ಕೆಲಸ ಕಾರ್ಯಗಳು ಕರ್ನಾಟಕ ನಾಗರಿಕ ಸೇವಾ ನಿಯಮ, ಕರ್ನಾಟಕ ಆರ್ಥಿಕ ಸಂಹಿತೆ, ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮ ಹಾಗೂ ಸರಕಾರದಿಂದ ಕಾಲಕಾಲಕ್ಕೆ ಹೊರಡಿಸುವ ಆದೇಶಗಳನ್ವಯ ನಿರ್ವಹಿಸಲಾಗುತ್ತಿದೆ. ಇಲಾಖೆಯ ತಾಂತ್ರಿಕ ಕೆಲಸಗಳನ್ನು ಕರ್ನಾಟಕ ರೇಷ್ಮೆ ಹುಳುವಿನ ಬಿತ್ತನೆ, ಗೂಡು ಮತ್ತು ರೇಷ್ಮೆ ನೂಲು ಕಾಯ್ದೆ 1959 ಮತ್ತು ನಿಯಮಾವಳಿಗಳು 1960 ರಂತೆ ನಿರ್ವಹಿಸಲಾಗುತ್ತದೆ.

**4(1)(ಬಿ)(v) ಕರ್ತವ್ಯ ನಿರ್ವಹಿಸುವಲ್ಲಿ ಅನುಸರಿಸಲಾಗುವ ಕಾಯ್ದೆ ಮತ್ತು ನಿಯಮಗಳು**

ರೇಷ್ಮೆ ಉಪನಿರ್ದೇಶಕರು :- ಇಲಾಖೆಯ ತಾಂತ್ರಿಕ ಕೆಲಸಗಳನ್ನು ಕರ್ನಾಟಕ ರೇಷ್ಮೆ ಹುಳುವಿನ ಬಿತ್ತನೆ, ಗೂಡು ಮತ್ತು ರೇಷ್ಮೆ ನೂಲು ಕಾಯ್ದೆ 1959 ಮತ್ತು ನಿಯಮಾವಳಿಗಳು 1960 ರಂತೆ ನಿರ್ವಹಿಸುವರು.

ಆರ್ಥಿಕ ಪ್ರತ್ಯಾಯೋಜನೆಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ03 ಟಿಎಫ್‌ಪಿ 2018 ದಿ 14-5-2018. ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ನಿಯಮ 1999 ಮತ್ತು 2000 ಗಳನ್ವಯ ಕಾರ್ಯನಿರ್ವಹಿಸಲಾಗುವುದು.

**4(1)(ಬಿ)(vi) ಕಛೇರಿಯಲ್ಲಿ ನಿರ್ವಹಿಸಲಾಗುವ ದಾಖಲೆ ಮತ್ತು ದಾಸ್ತಾವೇಜುಗಳು**

1. ಈ ಕಛೇರಿಯ ಸಿಬ್ಬಂದಿಗಳ ಸೇವಾ ಪುಸ್ತಕ ಮತ್ತು ವೈಯಕ್ತಿಕ ಕಡತಗಳು.
2. ಕಛೇರಿ ಆದೇಶ ಕಡತಗಳು.
3. ಅಧೀನ ಸಂಸ್ಥೆಗಳಿಗೆ ಸಾದಿಲ್ವಾರು ವೆಚ್ಚ ಕುರಿತು ನೀಡಿದ ಮಂಜೂರಾತಿ ಆದೇಶಗಳು.
4. ಈ ಕಛೇರಿಯ ಮತ್ತು ಅಧೀನ ಸಂಸ್ಥೆ ಸಿಬ್ಬಂದಿಗಳ ಸಾಮಾನ್ಯ ಭವಿಷ್ಯ ನಿಧಿ ಮಂಜೂರಾತಿ ಕಡತ.
5. ಸುತ್ತೋಲೆ ಕಡತ.
6. ನಿಯತಕಾಲಿಕೆಗಳು.
7. ದಾಸ್ತಾನು ಕಡತ.
8. ಅಧೀನ ಸಂಸ್ಥೆಗಳಿಂದ ಸ್ವೀಕೃತವಾಗುವ ಸಹಾಯಧನ / ಪ್ರೋತ್ಸಾಹಧನ ಮಂಜೂರಾತಿ ಪ್ರಸ್ತಾವನೆಗಳು.
9. ಮಾಸಿಕ ಪ್ರಗತಿ ಪತ್ರಿಕೆ.
10. ಸಕಾಲ ಕಡತ.

**4(1)(ಬಿ)(vii) ಇಲಾಖೆಯ ಕಾರ್ಯಕ್ರಮ ರೂಪಿಸುವಲ್ಲಿ ಮತ್ತು ಅನುಷ್ಠಾನಗೊಳಿಸುವಲ್ಲಿ ಸಾರ್ವಜನಿಕರ ಸಲಹೆ ಮತ್ತು ಭಾಗವಹಿಸುವಿಕೆಗೆ ಅವಕಾಶವಿರುವ ಬಗ್ಗೆ ವಿವರಗಳು**

ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಕಾರ್ಯಕ್ರಮಗಳನ್ನು, ಜಿಲ್ಲಾ ಪಂಚಾಯತ್ ಸಭೆಗಳಲ್ಲಿ ಚರ್ಚಿಸಿ ಅನುಮೋದನೆಗೊಂಡನಂತರ ಅನುಷ್ಠಾನಗೊಳಿಸಲಾಗುತ್ತಿದೆ. ಫಲಾನುಭವಿ ಆಧಾರಿತ ಕಾರ್ಯಕ್ರಮಗಳಲ್ಲಿ ಫಲಾನುಭವಿಗಳ ಆಯ್ಕೆಯನ್ನು ಗ್ರಾಮ ಪಂಚಾಯತ್ ಸಭೆಗಳಲ್ಲಿ ಮಾಡಲಾಗುತ್ತಿದೆ. ಫಲಾನುಭವಿಗಳಿಗೆ ಸಹಾಯಧನವನ್ನು ಸಭೆ/ ಸಮಾರಂಭಗಳಲ್ಲಿ ಜನಪ್ರತಿನಿಧಿಗಳ ಸಮಕ್ಷಮದಲ್ಲಿ ವಿತರಿಸುವ ಕ್ರಮವನ್ನು ಅನುಸರಿಸಲಾಗುತ್ತಿದೆ.

**4(1)(ಬಿ)(viii) ಎರಡಕ್ಕಿಂತ ಹೆಚ್ಚು ಸದಸ್ಯರನ್ನು ಹೊಂದಿರುವ ಪ್ರಾಧಿಕಾರ ಮತ್ತು ಸಮಿತಿಗಳ ಪಟ್ಟಿ ಹಾಗೂ ಸದರಿ ಸಮಿತಿ ಸಭೆಯ ನಡುವಳಿಕೆಗಳು ಸಾರ್ವಜನಿಕರಿಗೆ ಲಭ್ಯವಿರುವ ಬಗ್ಗೆ ಮಾಹಿತಿ.**

--ಈ ಕಛೇರಿಯ ವ್ಯಾಪ್ತಿಯಲ್ಲಿ ಯಾವುದೇ ಸಮಿತಿಗಳು ಇರುವುದಿಲ್ಲ--

**4(1)(ಬಿ)(ix) ಅಧಿಕಾರಿ ಮತ್ತು ಸಿಬ್ಬಂದಿ ವರ್ಗದ ವಿವರಗಳು**
**2022–23**

| ಅಧಿಕಾರಿ ಮತ್ತು ಸಿಬ್ಬಂದಿ ವರ್ಗದ ವಿವರಗಳು | ಹುದ್ದೆ |
|---|---|
| ಶ್ರೀಯುತ / ಶ್ರೀಮತಿ<br>1. ಮಾರಪ್ಪ ಬಿ. ಬೀರಲದಿನ್ನಿ | ರೇಷ್ಮೆ ಉಪನಿರ್ದೇಶಕರು |
| 2. ಖಾಲಿ ಹುದ್ದೆ | ರೇಷ್ಮೆ ಸಹಾಯಕ ನಿರ್ದೇಶಕರು |
| 3. ಅಕ್ಷಯ್ ಎ.ಆರ್ | ಕಛೇರಿ ಅಧೀಕ್ಷಕರು |
| 4. ಆರ್. ನಾಗರಾಜ್ | ರೇಷ್ಮೆ ನಿರೀಕ್ಷಕರು (ಅನ್ಯ ಕಾರ್ಯ ವ್ಯವಸ್ಥೆ) |
| 5. ಮದನ್ ಕುಮಾರ್ ಜಿ.ಎಸ್ | ಪ್ರಥಮ ದರ್ಜೆ ಸಹಾಯಕರು |
| 6. ಖಾಲಿ ಹುದ್ದೆ | ಪ್ರಥಮ ದರ್ಜೆ ಸಹಾಯಕರು |
| 7. ಖಾಲಿ ಹುದ್ದೆ | ಪ್ರಥಮ ದರ್ಜೆ ಸಹಾಯಕರು |
| 8. ಮಂಜಪ್ಪ ಗೊರವರ | ದ್ವಿತಿಯ ದರ್ಜೆ ಸಹಾಯಕರು (ಅನ್ಯ ಕಾರ್ಯ ವ್ಯವಸ್ಥೆ) |
| 9. ಖಾಲಿ ಹುದ್ದೆ | ಬೆರಳಚ್ಚುಗಾರರು |
| 10. ಖಾಲಿ ಹುದ್ದೆ | ವಾಹನ ಚಾಲಕ |
| 11. ಖಾಲಿ ಹುದ್ದೆ | 'ಡ' ವರ್ಗದ ನೌಕರ |

**4(1)(ಬಿ)(ix) ಅಧಿಕಾರಿ / ಸಿಬ್ಬಂದಿ ಮಾಹೆವಾರು ಪಡೆಯುತ್ತಿರುವ ವೇತನ**
**2022–23**

| ಅಧಿಕಾರಿಗಳ ಹೆಸರು | ಪದನಾಮ | ವೇತನ (ರೂ.ಗಳಲ್ಲಿ) |
|---|---|---|
| ಶ್ರೀಯುತ/ಶ್ರೀಮತಿ<br>1. ಮಾರಪ್ಪ ಬಿ. ಬೀರಲದಿನ್ನಿ | ರೇಷ್ಮೆ ಉಪನಿರ್ದೇಶಕರು | ರೂ.93895.00 |
| 2. ಖಾಲಿ ಹುದ್ದೆ | ರೇಷ್ಮೆ ಸಹಾಯಕ ನಿರ್ದೇಶಕರು | – |
| 3. ಅಕ್ಷಯ್ ಎ.ಆರ್ | ಕಛೇರಿ ಅಧೀಕ್ಷಕರು | ರೂ.54202.00 |
| 4. ಆರ್. ನಾಗರಾಜ್ | ರೇಷ್ಮೆ ನಿರೀಕ್ಷಕರು | ರೂ.72696.00 |
| 5. ಖಾಲಿ ಹುದ್ದೆ | ಪ್ರಥಮ ದರ್ಜೆ ಸಹಾಯಕರು | – |

| | | |
|---|---|---|
| 6. ಮದನ್ ಕುಮಾರ್ ಜಿ.ಎಸ್ | ಪ್ರಥಮ ದರ್ಜೆ ಸಹಾಯಕರು | ರೂ.42387.00 |
| 7. ಖಾಲಿ ಹುದ್ದೆ | ಪ್ರಥಮ ದರ್ಜೆ ಸಹಾಯಕರು | – |
| 8. ಮಂಜಪ್ಪ ಗೊರವರ | ದ್ವಿತಿಯ ದರ್ಜೆ ಸಹಾಯಕರು | ರೂ.38067.00 |
| 9. ಖಾಲಿ ಹುದ್ದೆ | ಬೆರಳಚ್ಚುಗಾರರು | – |
| 10. ಖಾಲಿ ಹುದ್ದೆ | ವಾಹನ ಚಾಲಕ | – |
| 11. ಖಾಲಿ ಹುದ್ದೆ | 'ಡ' ವರ್ಗದ ನೌಕರ | – |

**4(1)(ಬಿ)(xi) ಆಯವ್ಯಯ – ವಂಟನೆ ಮತ್ತು ವೆಚ್ಚ**

**ಲೆಕ್ಕ ಶೀರ್ಷಿಕೆ – ವಂಟನೆ ಹಾಗೂ ವೆಚ್ಚ**
**2022–23 ನೇ ಸಾಲಿನ ಡಿಸೆಂಬರ್–2022ರ ಮಾಸಾಂತ್ಯದ ವರೆಗೆ ಮಂಜೂರಾಗಿರುವ ಆಯವ್ಯಯ ವೆಚ್ಚ**

| ಕ್ರಸಂ | ಕಾರ್ಯಕ್ರಮದ ವಿವರ | ಲೆಕ್ಕ ಶೀರ್ಷಿಕೆ | ಆಯವ್ಯಯದಲ್ಲಿ ಒದಗಿಸಿದ ಅನುದಾನ | ವೆಚ್ಚ |
|---|---|---|---|---|
| **1** | **ರೇಷ್ಮೆ ಅಭಿವೃದ್ಧಿ ಯೋಜನೆ** | | | |
| | ಅ) ಸಾಮಾನ್ಯ | 2851–00–107–1–35 (106) | 31.00 | 30.16 |
| | ಆ) ವಿಶೇಷ ಘಟಕ ಯೋಜನೆ | 2851–00–107–1–35 (422) | 6.56 | 4.76 |
| | ಇ) ಗಿರಿಜನ ಉಪ ಯೋಜನೆ | 2851–00–107–1–35 (423) | 15.78 | 14.84 |
| 2 | **ಕೇಂದ್ರ ಪುರಸ್ಕೃತ ಸಿಲ್ಕ್ ಸಮಗ್ರ ಯೋಜನೆ.** | | | |
| | ಅ) ಸಾಮಾನ್ಯ | 2851–00–107–1–35 (106) | 286.88 | 149.59 |
| | ಆ) ವಿಶೇಷ ಘಟಕ ಯೋಜನೆ | 2851–00–107–1–35 (422) | 64.58 | 20.48 |
| | ಇ) ಗಿರಿಜನ ಉಪ ಯೋಜನೆ | 2851–00–107–1–35 (423) | 46.8 | 27.00 |
| 3 | **ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ** | | | |
| | ಅ) ಸಾಮಾನ್ಯ | 2401–00–800–1–57(106) | 0 | 0 |
| | ಆ) ವಿಶೇಷ ಘಟಕ ಯೋಜನೆ | 2401–00–800–1–57(422) | 0 | 0 |
| | ಇ) ಗಿರಿಜನ ಉಪ ಯೋಜನೆ | 2401–00–800–1–57(423) | 0 | 0 |
| 4 | ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ | 2851–00–107–1–49(106) | 0 | 0 |
| 5 | ಜಿಲ್ಲಾ ವಲಯ ಯೋಜನೆ | 2851–00–104–0–30 | 58.82 | 31.88 |
| 6 | ತಾಲೂಕ ಪಂಚಾಯತ್ ಯೋಜನೆ | 2851–00–104–0–61 | 0 | 0 |
| | | **ಒಟ್ಟು** | **510.42** | **278.71** |

**4(1)(ಬಿ)(xii) ರೇಷ್ಮೆ ಕೃಷಿಕರಿಗೆ ಇಲಾಖೆಯಿಂದ ಒದಗಿಸುತ್ತಿರುವ ಸೌಲಭ್ಯಗಳು**

# 2022–23 ನೇ ಸಾಲಿನ ರೇಷ್ಮೆ ಅಭಿವೃದ್ಧಿ ಯೋಜನೆ ಹಾಗೂ ಸಿಲ್ಕ್ ಸಮಗ್ರ ಯೋಜನೆ

**ರೇಷ್ಮೆ ಹುಳು ಸಾಕಾಣಿಕೆ (ಸುಧಾರಿತ ಮೌಂಟೇಜಸ್‌ಗಳು ಸೇರಿದಂತೆ) ಸಲಕರಣೆಗಳ/ಹಿಪ್ಪುನೇರಳೆ ತೋಟ ನಿರ್ವಹಣಾ ಸಲಕರಣೆಗಳ ಖರೀದಿಗೆ ಸಹಾಯಧನ:**

ಈ ಕಾರ್ಯಕ್ರಮದಡಿ ರೇಷ್ಮೆ ಬೆಳೆಗಾರರಿಗೆ ಸೌಲಭ್ಯ ಒದಗಿಸುವ ಹಿತದೃಷ್ಟಿಯಿಂದ ಸಲಕರಣೆ ಖರೀದಿಗೆ ಘಟಕ ದರ ರೂ.75,000/– ನಿಗದಿಪಡಿಸಿದ್ದು, ಸಾಮಾನ್ಯ ವರ್ಗದ ರೇಷ್ಮೆ ಬೆಳೆಗಾರರಿಗೆ ಶೇ.75ರಂತೆ ಸಹಾಯಧನ ಮೊತ್ತ ರೂ.56250/– ಹಾಗೂ ಪ.ಜಾತಿ & ಪ.ಪಂಗಡದ ರೇಷ್ಮೆ ಬೆಳೆಗಾರರಿಗೆ ಶೇ.90ರಂತೆ ಸಹಾಯಧನ ಮೊತ್ತ ರೂ.67500/– ಗಳನ್ನು ನೀಡಲಾಗುವುದು. ಸಲಕರಣೆ ಖರೀದಿಗೆ ಹೊಸ ರೈತರಿಗೆ ಮೊದಲ ಆಧ್ಯತೆ ನೀಡುವುದು. ಇಲಾಖೆಯ ಖರೀದಿ ಸಮಿತಿ ಅನುಮೋದಿಸುವ ಸಲಕರಣೆಗಳ ಘಟಕ ದರಮಿತಿಗೆ ಒಳಪಟ್ಟು ಅನುಮೋದಿತ ಸಂಸ್ಥೆಗಳಿಂದ ಮಾತ್ರ ಖರೀದಿಸಬೇಕು.

**ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕೆ ಸಹಾಯಧನ:–**

ರೇಷ್ಮೆ ಹುಳುಗಳನ್ನು ಆರೋಗ್ಯಕರ ವಾತಾವರಣದಲ್ಲಿ ಸಾಕಾಣಿಕೆ ಮಾಡುವುದರಿಂದ ಉತ್ತಮ ಗುಣಮಟ್ಟದ ಗೂಡು, ಅಧಿಕ ಇಳುವರಿ ಹಾಗೂ ಅಧಿಕ ಆದಾಯ ಪಡೆಯಬಹುದಾಗಿದೆ. ಪ್ರತ್ಯೇಕ ಹುಳು ಸಾಕಾಣಿಕೆ ಮನೆಯಲ್ಲಿ ಸೋಂಕು ನಿವಾರಣೆಯನ್ನು ಸಮರ್ಪಕವಾಗಿ ಕೈಗೊಳ್ಳಬಹುದಾಗಿದ್ದು ಉತ್ತಮ ಇಳುವರಿ ಪಡೆಯಲು ಸಹಕಾರಿಯಾಗುತ್ತದೆ. ಜೇಷ್ಠತೆ ಆಧಾರದ ಮೇಲೆ ದೃಢೀಕೃತ ಜೇಷ್ಠತಾಪಟ್ಟಿಯನ್ವಯ ರೇಷ್ಮೆ ಹುಳು ಸಾಕಾಣಿಕೆ ಮನೆಗಳಿಗೆ ಸಹಾಯಧನ ನೀಡಲಾಗುವುದು. ಸಾಮಾನ್ಯ ವರ್ಗದ ರೇಷ್ಮೆ ಬೆಳೆಗಾರರಿಗೆ ಘಟಕ ದರದ ಶೇ.75 ರಷ್ಟನ್ನು ಹಾಗು ಪ.ಜಾತಿ & ಪ.ಪಂ ರೇಷ್ಮೆ ಬೆಳೆಗಾರರಿಗೆ ಶೇ.90 ರಷ್ಟು ಸಹಾಯಧನ ನೀಡಲಾಗುವುದು.

| ವರ್ಷ | ಮನೆಯ ಅಳತೆ (ಚದರಡಿ) | ಘಟಕದರ | ವಿವರ | ಕನಿಷ್ಠ ಇರಬೇಕಾದ | | ಸಹಾಯಧನ | |
|---|---|---|---|---|---|---|---|
| | | | | ಹಿಪ್ಪುನೇರಳೆ ಕ್ಷೇತ್ರ (ಎಕರೆ) | ಸಾಕುವ ಮೊಟ್ಟೆಗಳು (ಪ್ರತಿ ತಂಡ ದಲ್ಲಿ) | ಸಾಮಾನ್ಯ (ಶೇ.75) | ಪ.ಜಾತಿ &ಪ.ಪಂ (ಶೇ.90) |
| 2022 –23 | ಕಡಿಮೆ ವೆಚ್ಚದ ಹುಳು ಸಾಕಾಣಿಕೆ ಶೆಡ್ ನಿರ್ಮಾಣ 225–1000 ಚ.ಅಡಿಯವರೆಗೆ | 1 ಚದರ ಅಡಿಗೆ ಸಾಮಾನ್ಯ ವರ್ಗದ ರೈತರಿಗೆ ರೂ 100/– ರಂತೆ ಹಾಗು ಪ.ಜಾತಿ & ಪ.ಪಂ ರೈತರಿಗೆ ರೂ.120/– ರಂತೆ ಪ್ರೊರೇಟಾ ಆಧರಿಸಿ ಕನಿಷ್ಠ 225 ಚ.ಅಡಿಯಿಂದ ಗರಿಷ್ಠ 1000 ಚ.ಅಡಿಯವರೆಗೆ ಸಹಾಯಧನ ನೀಡಲಾಗುತ್ತದೆ. | | ಕನಿಷ್ಠ 0.20 ಗರಿಷ್ಠ 1.20 | 50–250 | – | – |
| | 225 | 0.90 | ರೇಷ್ಮೆ ಹುಳು ಸಾಕಾಣಿಕೆ ಮನೆ | 0.20 | 50 | 0.675 | 0.81 |
| | 600 | 3.00 | | 1.00 | 100–150 | 2.25 | 2.70 |
| | 1000 | 4.00 | | 1.20 | 150–250 | 3.00 | 3.60 |

**ಹಣ್ಣು ಹುಳುವಿನ ಮನೆ (ಮೌಂಟಿಂಗ್ ಹಾಲ್) ನಿರ್ಮಾಣಕ್ಕೆ ಸಹಾಯಧನ:–**

ಹಣ್ಣಾಗಿರುವ ಹುಳುಗಳನ್ನು, ವಾತಾವರಣದಲ್ಲಿ ಆಗುವ ಉಷ್ಣಾಂಶ ಮತ್ತು ಶೈತ್ಯಾಂಶಗಳ ವೈಪರೀತ್ಯಗಳಿಂದ ಕಾಪಾಡಿ ಉತ್ತಮ ಗುಣಮಟ್ಟದ ಗೂಡುಗಳನ್ನುಕಟ್ಟುವ ಪರಿಸರ ಒದಗಿಸುವುದು ಮೌಂಟಿಂಗ್ ಹಾಲ್ ನಿರ್ಮಾಣದ ಉದ್ದೇಶ. ಮೌಂಟಿಂಗ್ ಹಾಲ್ ಹಣ್ಣು ಹುಳುವಿನ ಮನೆ (ಮೌಂಟಿಂಗ್ ಹಾಲ್) ನಿಮಾಣ ಮಾಡಲು

ಸಹಾಯಧನ ವಿವರಗಳು ಕೆಳಕಂಡಂತಿದೆ. ಸಾಮಾನ್ಯ ವರ್ಗದ ರೇಷ್ಮೆ ಬೆಳೆಗಾರರಿಗೆ ಈ ಕೆಳಗಿನ ಪರಿಮಿತಿಗಳನ್ವಯ ಸಹಾಯಧನ ಸೌಲಭ್ಯ ಇರುತ್ತದೆ.

| ಹಣ್ಣು ಹುಳುವಿನ ಮನೆಯ ಉದ್ದಗಲ, ವಿಸ್ತೀರ್ಣ (ಚ.ಅ) | ಮನೆ ಛಾವಣಿ ಮಾದರಿ | ಸಹಾಯಧನ (ರೂಗಳಲ್ಲಿ) | ಹಿಪ್ಪುನೇರಳೆ ಕ್ಷೇತ್ರ |
|---|---|---|---|
| 20 * 30 = 600 | ಮಂಗಳೂರು ಹೆಂಚು/ಎ.ಸಿ. ಶೀಟ್/ ಆರ್.ಸಿ.ಸಿ | 0.18 | 1 ಎಕರೆ |
| 20 * 50 = 1000 | ಮಂಗಳೂರು ಹೆಂಚು/ಎ.ಸಿ. ಶೀಟ್/ ಆರ್.ಸಿ.ಸಿ | 0.30 | 1 1/2 ಎಕರೆ |
| 20 * 50 = 1250 | ಮಂಗಳೂರು ಹೆಂಚು/ಎ.ಸಿ. ಶೀಟ್/ ಆರ್.ಸಿ.ಸಿ | 0.375 | 2 ಎಕರೆ |
| 30 * 50 = 1500 | ಮಂಗಳೂರು ಹೆಂಚು/ಎ.ಸಿ. ಶೀಟ್/ ಆರ್.ಸಿ.ಸಿ | 0.45 | 2 1/2 ಎಕರೆ |
| 30 * 60 = 1800 | ಮಂಗಳೂರು ಹೆಂಚು/ಎ.ಸಿ. ಶೀಟ್/ ಆರ್.ಸಿ.ಸಿ | 0.50 ಕ್ಕೆ ಮಿತಿಗೊಳಿಸಿದೆ | 3 ಎಕರೆ |
| ಎತ್ತರ ಕನಿಷ್ಠ 10 ಅಡಿ ( 12 ಅಡಿಗಿಂತ ಹೆಚ್ಚಿರುವುದು ಸೂಕ್ತ ವಾತಾವರಣ ನಿರ್ವಹಣೆಗೆ ಸಹಕಾರಿಯಲ್ಲ) | | | |

ಪ.ಜಾತಿ & ಪ.ಪಂಗಡದ ರೇಷ್ಮೆ ಬೆಳೆಗಾರರಿಗೆ ಈ ಕೆಳಗಿನ ಪರಿಮಿತಿಗಳನ್ವಯ ಸಹಾಯಧನ ಸೌಲಭ್ಯ ಇರುತ್ತದೆ.

| ಹಣ್ಣು ಹುಳುವಿನ ಮನೆಯ ಉದ್ದಗಲ, ವಿಸ್ತೀರ್ಣ (ಚ.ಅ) | ಮನೆ ಛಾವಣಿ ಮಾದರಿ | ಸಹಾಯಧನ (ರೂಗಳಲ್ಲಿ) | ಹಿಪ್ಪುನೇರಳೆ ಕ್ಷೇತ್ರ |
|---|---|---|---|
| 20 * 30 = 600 | ಮಂಗಳೂರು ಹೆಂಚು/ಎ.ಸಿ. ಶೀಟ್/ ಆರ್.ಸಿ.ಸಿ | 0.24 | 1 ಎಕರೆ |
| 20 * 50 = 1000 | ಮಂಗಳೂರು ಹೆಂಚು/ಎ.ಸಿ. ಶೀಟ್/ ಆರ್.ಸಿ.ಸಿ | 0.40 | 1 1/2 ಎಕರೆ |
| 20 * 50 = 1250 | ಮಂಗಳೂರು ಹೆಂಚು/ಎ.ಸಿ. ಶೀಟ್/ ಆರ್.ಸಿ.ಸಿ | 0.50 | 2 ಎಕರೆ |
| 30 * 50 = 1500 | ಮಂಗಳೂರು ಹೆಂಚು/ಎ.ಸಿ. ಶೀಟ್/ ಆರ್.ಸಿ.ಸಿ | 0.60 | 2 1/2 ಎಕರೆ |
| 30 * 60 = 1800 | ಮಂಗಳೂರು ಹೆಂಚು/ಎ.ಸಿ. ಶೀಟ್/ ಆರ್.ಸಿ.ಸಿ | 0.75 ಕ್ಕೆ ಮಿತಿಗೊಳಿಸಿದೆ | 3 ಎಕರೆ |
| ಎತ್ತರ ಕನಿಷ್ಠ 10 ಅಡಿ ( 12 ಅಡಿಗಿಂತ ಹೆಚ್ಚಿರುವುದು ಸೂಕ್ತ ವಾತಾವರಣ ನಿರ್ವಹಣೆಗೆ ಸಹಕಾರಿಯಲ್ಲ) | | | |

**ಚಾಕಿ ತೋಟ ನಿರ್ವಹಣೆ, ಚಾಕಿ ಹುಳು ಸಾಕಾಣಿಕೆ ಕಟ್ಟಡ ನಿರ್ಮಾಣ ಹಾಗೂ ಚಾಕಿ ಸಾಕಾಣಿಕೆ ಸಲಕರಣೆ ಖರೀದಿಗೆ ಸಹಾಯಧನ:-**

ಯಶಸ್ವಿ ರೇಷ್ಮೆ ಬೆಳೆ ಬೆಳೆಯಲು ಚಾಕಿ ಸಾಕಾಣಿಕಾ ನಿರ್ವಹಣೆಯನ್ನು ಆಧರಿಸಿದೆ ಕಾರಣ ರೇಷ್ಮೆ ಬೆಳೆಗಾರರಿಗೆ ವೈಕ್ತಿಕವಾಗಿ ಇಲ್ಲವೇ ಸರ್ಕಾರೇತರ ಸಂಸ್ಥೆಗಳು(ಎನ್‌ಜಿಓ) ಸ್ವಸಹಾಯ ಗುಂಪು ಹಾಗೂ ಸಮುದಾಯ ಆಧಾರಿತ ಸಂಸ್ಥೆಗಳು ಸ್ವಂತ ಅಥವಾ ಗುತ್ತಿಗೆ ಆಧಾರದಲ್ಲಿ (ಕನಿಷ್ಠ 10 ವರ್ಷ) ಜಮೀನು ಪಡೆದು ಚಾಕಿ ಸಾಕಾಣಿಕಾ ಕೇಂದ್ರ ಪ್ರಾರಂಭಿಸಬಹುದು. ಸಹಾಯಧನ ವಿವರ.

| ವರ್ಷ | ಘಟಕದರ | ಸಾಮಾನ್ಯ ವರ್ಗ ಸಹಾಯಧನ(75%) | ಎಸ್‌ಸಿಪಿ/ ಟಿಎಸ್‌ಪಿ ಸಹಾಯಧನ (90%) |
|---|---|---|---|
| 2022-23 | 12.00 | 9.00 | 10.80 |

**ದ್ವಿತಳಿ ಮೊಟ್ಟೆಗಳಿಗೆ ಚಾಕಿ ಸಾಕಾಣಿಕೆ ವೆಚ್ಚದ ಸಹಾಯಧನ ನೀಡಿಕೆ**

ದ್ವಿತಳಿ ಮೊಟ್ಟೆಗಳ ಚಾಕಿ ಸಾಕಾಣಿಕೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ನೋಂದಾಯಿತ ದ್ವಿತಳಿ ಚಾಕಿ ಸಾಕಾಣಿಕಾ ಕೇಂದ್ರಗಳು ಚಾಕಿ ಮಾಡಿ ವಿತರಿಸುವ ಪ್ರತಿ 100 ದ್ವಿತಳಿ ಮೊಟ್ಟೆಗಳ ಚಾಕಿಗೆ ಸಹಾಯಧನವಾಗಿ ರೂ.1000/- ಗಳನ್ನು ರೈತರಿಗೆ ನೀಡಲಾಗುವುದು.

# 2022–23 ನೇ ಸಾಲಿನ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ

## ಕಾರ್ಯಕ್ರಮ

### 1. ಗುಣಮಟ್ಟದ ಉತ್ಪಾದನೆಗಾಗಿ ಮಣ್ಣಿನ ಫಲವತ್ತತೆ ಸಮೃದ್ಧಿಗೆ ಪ್ಯಾಕೇಜ್:-

ಆಧುನಿಕ ಹಿಪ್ಪುನೇರಳೆ ಬೇಸಾಯ ಪದ್ಧತಿಯಲ್ಲಿ ಶಿಫಾರಸ್ಸು ಮಾಡುವ ಹಸಿರೆಲೆ ಗೊಬ್ಬರ, ಹಿಂಡಿಗಳು ಜೈವಿಕ ಗೊಬ್ಬರಗಳು ಮತ್ತು ಸೂಕ್ಷ್ಮ ಪೋಷಕಾಂಶಗಳುಳ್ಳ ಎಲೆ ಸಿಂಪರಕಗಳನ್ನೊಳಗೊಂಡ ಸಮಗ್ರ ಪೋಷಕಾಂಶಗಳ ನಿರ್ವಹಣಾ ಪದ್ಧತಿಯನ್ನು ಅನುಸರಿ ಉತ್ತಮ ಇಳುವರಿ ಪಡೆಯಬಹುದು.

**ಘಟಕ ದರಗಳ ವಿವರಗಳು**

| ಕ್ರಸಂ | ವಿವರ | ಗುಣಮಟ್ಟದ ಉತ್ಪಾದನೆಗಾಗಿ ಮಣ್ಣಿನ ಫಲವತ್ತತೆ ಸಮೃದ್ಧಿಗೆ ಪ್ಯಾಕೇಜ್ |
|---|---|---|
| 1 | ಘಟಕ ದರ<br>1. ಹಸಿರು ಗೊಬ್ಬರದ ಬೀಜ (ಸೆಣಬು. ಢಯಂಚ. ಕಲಸಂದೆ. ಹುರುಳಿ):40 ಕಿ.ಜಿ/ಎಕರೆಗೆ<br>ಅಂದಾಜು ರೂ.70/ಕಿ.ಜಿ<br>ಒಟ್ಟು= ರೂ.2800.00<br>2. ಬೇವಿನ ಹಿಂಡಿ: 400 ಕಿ.ಜಿ/ಎಕರೆಗೆ<br>ಅಂದಾಜು ರೂ.25.00/ಕಿ.ಜಿ<br>ಒಟ್ಟು= ರೂ.10000.00<br>3. ಸಸ್ಯ ಸಂವರ್ಧಕ: 5. ಲೀ/ಎಕರೆಗೆ<br>ಅಂದಾಜು ರೂ.125/ಲೀ.<br>ಒಟ್ಟು= ರೂ.625.00<br>4. ಜೈವಿಕ ಗೊಬ್ಬರ (Seri- bio NPK-A consortium of NPK bacterial bio-fertilizer ): 20 ಕಿ.ಜಿ/ಎಕರೆಗೆ<br>ಅಂದಾಜು ರೂ.210/ಕಿ.ಜಿ<br>ಒಟ್ಟು= ರೂ.4200.00<br>ಒಟ್ಟಾರೆ ಘಟಕ ದರ ರೂ.17625.00/ಎಕರೆ | ರೂ.17625/- |
| 2 | ಸಹಾಯಧನ (ಶೇಕಡ 50) | ರೂ.8813/- ಎಕರೆಗೆ |

# 2022–23 ನೇ ಸಾಲಿನ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ (ಪಿಎಂಕೆಎಸ್‌ವೈ) ಹನಿನೀರಾವರಿ ಕಾರ್ಯಕ್ರಮ

ನೀರು ರೇಷ್ಮೆ ಕೃಷಿಯಲ್ಲಿ ಅತ್ಯಗತ್ಯವಾಗಿರುವ ಸಂಪನ್ಮೂಲಗಳಲ್ಲಿ ಒಂದು ಆಧುನಿಕ ಹಿಪ್ಪುನೇರಳೆ ವ್ಯವಸಾಯದಲ್ಲಿ ನೀರಿನ ಮಿತ ಬಳಕೆ ಮತ್ತು ಸಂರಕ್ಷಣೆ ಅತ್ಯಂತ ಮಹತ್ವವನ್ನು ಪಡೆದಿದ್ದು ಈ ನಿಟ್ಟಿನಲ್ಲಿ ಹನಿನೀರಾವರಿಯ ಬಳಕೆ ಅತ್ಯವಶ್ಯಕವಾಗಿದೆ. ಹನಿನೀರಾವರಿ ಪದ್ಧತಿಯ ಬಳಕೆಯಿಂದ ನಾಡಿನ ಜಲಸಂಪನ್ಮೂಲವನ್ನು ಸಂರಕ್ಷಣೆ ಹಾಗೂ ಮಿತವ್ಯಯ ಮಾಡಬಹುದಲ್ಲದೇ ಬೆಳೆಗಳಿಂದ ಹೆಚ್ಚಿನ ಇಳುವರಿಯನ್ನು ಪಡೆಯಬಹುದು.

ಹನಿನೀರಾವರಿಯ ಮಹತ್ವವನ್ನು ಮನಗಂಡು 1997-98 ಸಾಲಿನಂದ ಇಲಾಖೆಯಲ್ಲಿ ವಿವಿಧ ಯೋಜನೆಗಳಡಿ ಹನಿನೀರಾವರಿ ಅಳವಡಿಕೆಗೆ ಪ್ರೋತ್ಸಾಹ ನೀಡಲಾಗಿರುತ್ತದೆ. 2014-15ನೇ ಸಾಲಿನಲ್ಲಿ ಹನಿನೀರಾವರಿ ಕಾರ್ಯಕ್ರಮವನ್ನು ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನದಡಿ ಅನುಷ್ಠಾನಗೊಳಿಸಾಗಿದ್ದು, 2015-16 ನೇ ಸಾಲಿನಿಂದ ಈ ಕಾರ್ಯಕ್ರಮವನ್ನು ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಅನುಷ್ಠಾನಗೊಳಿಸಲಾಗಿದೆ.

| ವರ್ಗ | ಕೇಂದ್ರದ ಪಾಲು(%) | ರಾಜ್ಯದ ಪಾಲು(%) | | | ಒಟ್ಟು (%) |
|---|---|---|---|---|---|
| | | ಕಡ್ಡಾಯವಾಗಿ ನೀಡಬೇಕಾದ ಪಾಲು | ಹೆಚ್ಚುವರಿ ಪಾಲು | ಒಟ್ಟು ರಾಜ್ಯ ಪಾಲು | |
| 2.00 ಹೆಕ್ಟೇರ್ ವರೆಗಿನ ಸಹಾಯಧನ | | | | | |
| ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ | 33 | 22 | 35 | 57 | 90 |
| ಇತರೆ | 33 | 22 | 20 | 42 | 75 |
| 2.00 ಹೆಕ್ಟೇರ್ ಮೇಲ್ಪಟ್ಟ ಸಹಾಯಧನ (2.00 ಹೆ ಮೇಲ್ಪಟ್ಟು 5.00 ಹೆಕ್ಟೇರ್ ವರೆಗೂ) | | | | | |
| ಎಲ್ಲಾ ವರ್ಗದ ರೈತರಿಗೆ | 27 | 18 | - | 18 | 45 |

## 1. <u>ಜಿಲ್ಲಾ ಪಂಚಾಯತ್ ಯೋಜನೆಗಳು</u> :

**ಕಾರ್ಯಕ್ರಮ :**

## ರೇಷ್ಮೆ ಬೆಳೆಗಾರರಿಗೆ ಸಹಾಯಧನ:-

### <u>ಅ. ರೇಷ್ಮೆ ಬೆಳೆಗಾರರಿಗೆ ಸಹಾಯಧನ ಲೆಕ್ಕಶೀರ್ಷಿಕೆ 2851-00-104-0-30</u>

2021-22ನೇ ಸಾಲಿನ ಆಯವ್ಯಯದಲ್ಲಿ ಯೋಜನೆಗೆ ಸಂಬಂಧಿಸಿದಂತೆ ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳನ್ನು ಈ ಕೆಳಕಂಡ ಮಾರ್ಗಸೂಚಿಯಂತೆ ಅನುಷ್ಠಾನಗೊಳಿಸುವುದು, ಶೇ.33ರಷ್ಟು ಆಯವ್ಯಯವನ್ನು ಮಹಿಳಾ ಫಲಾನುಭವಿಗಳಿಗೆ, ಶೇ.17.15ರಷ್ಟನ್ನು ಪರಿಶಿಷ್ಠ ಜಾತಿ, ಶೇ.6.95ರಷ್ಟು ಪರಿಶಿಷ್ಠ ಪಂಗಡದವರಿಗೆ ಹಾಗೂ ಶೇ.15ರಷ್ಟು ಅಲ್ಪ ಸಂಖ್ಯಾತ ವರ್ಗದವರಿಗೆ ಮೀಸಲಾಗಿರಿಸಿ ಕಾರ್ಯಕ್ರಮಗಳನ್ನು ಅನುಷ್ಟಾನಮಾಡುವುದು. ಜಿಲ್ಲಾ ಪಂಚಾಯತ್ ಯೋಜನೆಯಡಿಯಲ್ಲಿ ಒದಗಿಸಿರುವ ಒಟ್ಟು ಅನುದಾನದಲ್ಲಿ ಶೇ.5 ರಷ್ಟು ಅನುದಾನವನ್ನು ರೇಷ್ಮೆ ವಸ್ತು ಪ್ರದರ್ಶನ/ಕಾರ್ಯಾಗಾರ/ವಿಚಾರ ಸಂಕಿರಣ, ಅದೇ ರೀತಿ ತಾಲ್ಲೂಕು ಪಂಚಾಯತ್ ಯೋಜನೆಯಡಿಯಲ್ಲಿ ಒದಗಿಸಿರುವ ಒಟ್ಟು ಅನುದಾನದಲ್ಲಿ ಶೇ.5ರಷ್ಟು ಅನುದಾನವನ್ನು ತಾಂತ್ರಿಕ ಸಲಹೆಗಳು, ಪ್ರದರ್ಶನಗಳು, ಪ್ರಚಾರ, ಶ್ರವಣ ಮತ್ತು ದೃಶ್ಯ ಹಾಗೂ ಮಹಿಳಾ ಪ್ರಾತ್ಯಕ್ಷತಾ ಕ್ಷೇತ್ರಗಳ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಹಣ ಒದಗಿಸಿಕೊಂಡು, ಉಳಿಕೆಯಾಗುವ ಅನುದಾನದಲ್ಲಿ MGNREGA ಮಾನದಂಡಗಳ ಅರ್ಹತೆ ಮೀರಿದ ರೇಷ್ಮೆ ಬೆಳೆಗಾರರಿಗೆ ಹಿಪ್ಪುನೇರಳೆ ನಾಟಿ ಮತ್ತು ಹಿಪ್ಪುನೇರಳೆ ನರ್ಸರಿ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲು ಕ್ರಿಯಾಯೋಜನೆ ತಯಾರಿಸುವುದು. ವಿಭಾಗೀಯ ರೇಷ್ಮೆ ಜಂಟಿ ನಿರ್ದೇಶಕರವರಿಂದ ತಾಂತ್ರಿಕ ಅನುಮೋದನೆಯನ್ನು ಹಾಗೂ ಜಿಲ್ಲಾ ಪಂಚಾಯತ್‌ವತಿಯಿಂದ ಆಡಳಿತಾತ್ಮಕ ಅನುಮೋದನೆಯನ್ನು ಪಡೆದುಕೊಂಡು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸೂಚಿಸಿದೆ.

1. ಹಿಪ್ಪುನೇರಳೆ ನರ್ಸರಿ:

ಹಿಪ್ಪುನೇರಳೆ ತೋಟ ಸ್ಥಾಪನೆಗೆ ಬಿತ್ತನೆ ಕಡ್ಡಿಗಳಿಗಿಂತ ನರ್ಸರಿಯಲ್ಲಿ ಬೆಳೆಸಿದ ಸಸಿಗಳು ಸದೃಢವಾಗಿ ಬೇರುಬಿಟ್ಟಿದ್ದು, ಆರೋಗ್ಯಕರವಾಗಿ 4 ತಿಂಗಳವರೆಗೆ ಬೆಳೆದ ಹಿಪ್ಪುನೇರಳೆ ಸಸಿ ನಾಟಿ ಮಾಡುವುದರಿಂದ ಹಿಪ್ಪುನೇರಳೆ ತೋಟ ಸ್ಥಾಪನೆಯಲ್ಲಿ ತಪ್ಪು ಗುಳಿಗಳಾಗುವುದಿಲ್ಲ, ನರ್ಸರಿ ಬೆಳೆಸುವುದು ಒಂದು ಲಾಭದಾಯಕ ಕಸುಬಾಗಿರುವುದರಿಂದ, ವಾಣಿಜ್ಯ ಪ್ರಮಾಣದಲ್ಲಿ ಸಸಿ ಬೆಳೆಸುವುದನ್ನು ಪ್ರೋತ್ಸಾಹಿಸಲು ಸಹಾಯ ನೀಡಲಾಗುತ್ತದೆ. ವಿವರ ಕೆಳಗಿನಂತಿದೆ

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಕಾರ್ಯಕ್ರಮಗಳ ವಿವರ | ಘಟಕ ದರ | ಸಹಾಯಧನ | |
|---|---|---|---|---|
| | | | ಸಾಮಾನ್ಯ | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ |
| 1 | ಹಿಪ್ಪುನೇರಳೆ ನರ್ಸರಿ(ಎಕರೆ) | 1.50 | 0.75(50%) | 1.35(90%) |

## 2. ಹಿಪ್ಪುನೇರಳೆ ನಾಟಿ ಮಾಡುವ ರೇಷ್ಮೆ ಕೃಷಿಕರಿಗೆ ಸಹಾಯಧನ :

ಯಶಸ್ವಿ ಗೂಡು ಉತ್ಪಾದನೆಗೆ ಹಿಪ್ಪುನೇರಳೆ ಗುಣಮಟ್ಟ ಮುಖ್ಯವಾದ ಅಂಶ. ಈ ನಿಟ್ಟಿನಲ್ಲಿ ಹಿಪ್ಪುನೇರಳೆ ತೋಟ ನಿರ್ವಹಣೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ. ನೀರಾವರಿ ಸೌಲಭ್ಯವಿರುವ ರೈತರನ್ನು / ಕೃಷಿಕರನ್ನು ಆಯ್ಕೆ ಮಾಡಿ ಹಿಪ್ಪುನೇರಳೆ ನಾಟಿ ಮಾಡುವ ತೋಟ ವಿಸ್ತರಿಸುವ / ಸಾಂಪ್ರದಾಯಿಕ ಹಿಪ್ಪುನೇರಳೆ ತಳಿ ತೆಗೆದು ಹೆಚ್ಚಿನ ಇಳುವರಿ ನೀಡುವ ಹೊಸ ತಳಿಗೆ ಬದಲಾಯಿಸುವ ರೇಷ್ಮೆ ಕೃಷಿಕರಿಗೆ ಸಹಾಯಧನ ಒದಗಿಸಲಾಗುವುದು. ಒಬ್ಬ ಫಲಾನುಭವಿ ಗರಿಷ್ಠ 2.00 ಹೆಕ್ಟೇರ್‌ವರೆಗೆ ಸೌಲಭ್ಯ ಪಡೆಯಲು ಅವಕಾಶವಿರುತ್ತದೆ. ವಿವರ ಕೆಳಗಿನಂತಿದೆ

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಕಾರ್ಯಕ್ರಮಗಳ ವಿವರ | ಘಟಕ ದರ | ಸಹಾಯಧನ | |
|---|---|---|---|---|
| | | | ಸಾಮಾನ್ಯ | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ |
| 1 | ಹಿಪ್ಪುನೇರಳೆ ನಾಟಿ(ಎಕರೆ) | 0.50 | 0.375(75%) | 0.45(90%) |

## 3 ರೇಷ್ಮೆ ವಸ್ತು ಪ್ರದರ್ಶನ / ಕಾರ್ಯಗಾರ:

ಜಿಲ್ಲಾ ಮಟ್ಟದ ವಸ್ತು ಪ್ರದರ್ಶನ / ಕಾರ್ಯಗಾರ /ವಿಚಾರ ಸಂಕೀರ್ಣಗಳಿಗಾಗಿ ರೂ.25000/- ಮಾತ್ರ ನಿಗದಿ ಪಡಿಸಿದೆ.

ರೈತರನ್ನು ರೇಷ್ಮೆ ಚಟುವಟಿಕೆಗಳ ಬಗ್ಗೆ ತಿಳುವಳಿಕೆ ಮೂಡಿಸಲು ಅಧ್ಯಯನ ಪ್ರವಾಸ ಕೈಗೊಳ್ಳಲು ಅಗತ್ಯಕ್ಕೆ ತಕ್ಕಂತೆ ಗರಿಷ್ಠ ರೂ.50,000/-ವರೆಗೆ ಅವಕಾಶ ಕಲ್ಪಿಸಿಕೊಳ್ಳುವುದು.

- ಇತರೆ ಜಿಲ್ಲಾ ಉತ್ಸವಗಳು. ರೂ. 50,000/

**4(1)(ಬಿ)(xiii)** ನೀಡಿರುವ ರಿಯಾಯಿತಿಗಳನ್ನು, ಅನುಮತ್ತಿ ಪತ್ರಗಳನ್ನು ಅಥವಾ ಅಧಿಕಾರ ಪತ್ರಗಳನ್ನು ಪಡೆಯುವವರ ವಿವರಗಳು.

# ಯಾವುದು ಇರುವುದಿಲ್ಲ.

## 4(1)(ಬಿ)(xiv) ವಿದ್ಯುನ್ಮಾನ ರೂಪದಲ್ಲಿ ಲಭ್ಯವಿರುವ ಮಾಹಿತಿ

**ಇಲಾಖೆಯ ಅಂತರ್ಜಾಲ** https://sericulture.karnataka.gov.in/english

1. **ಮಾಹೆವಾರು ಪ್ರಗತಿಯ ಅಂಕಿ ಅಂಶಗಳು**
2. **ಇಲಾಖೆಯಿಂದ ಹೊರಡಿಸಿರುವ ಅಧಿಸೂಚನೆಗಳು.**
3. **ರೇಷ್ಮೆ ಬೆಳೆಗಾರರಿಗೆ / ರೀಲರುಗಳಿಗೆ ತಾಂತ್ರಿಕ ಮಾಹಿತಿ.**
4. **ನಾಗರೀಕ ಸನ್ನದು**
5. **ಮಾಸಿಕ ಪ್ರಗತಿ ವರದಿಗಳು.**

**ರೇಷ್ಮೆ ಉಪನಿರ್ದೇಶಕರು ಜಿಲ್ಲಾ ಪಂಚಾಯತ್ ಚಿತ್ರದುರ್ಗ ರವರ ಇ-ಮೇಲ್ dds.zp.cta@gmail.com**

## 4(1)(ಬಿ)(xv) ನಾಗರಿಕರಿಗಾಗಿ ಮಾಹಿತಿ ಪಡೆಯಲು ಲಭ್ಯವಿರುವ ವಿವರಣೆ, ಗ್ರಂಥಾಲಯ, ಕೆಲಸದ ಸಮಯ ಇತ್ಯಾದಿ ವಿವರಗಳು.

ತಾಲ್ಲೂಕು ಮಟ್ಟದಲ್ಲಿ ವಿಚಾರ ಸಂಕೀರ್ಣಗಳು, ಕಾರ್ಯಾಗಾರಗಳು ಹಾಗೂ ವಿಚಾರಗೊಷ್ಠಿಗಳನ್ನು ಏರ್ಪಡಿಸಿ ರೇಷ್ಮೆ ಬೆಳೆಗಾರರಿಗೆ ತಾಂತ್ರಿಕ ಮಾಹಿತಿಗಳನ್ನು ಒದಗಿಸಲಾಗುವುದು ರೇಷ್ಮೆ ಸಂಶೋಧನಾ ಸಂಸ್ಥೆಗಳಲ್ಲಿ ಕಾರ್ಯಾಗಾರಗಳನ್ನು ಏರ್ಪಡಿಸಿ ಹೊಸ ತಾಂತ್ರಿಕ ಕಥೆಗಳ ಬಗ್ಗೆ ಅರಿಮೂಡಿಸಲಾಗುವುದು ತಾಂತ್ರಿಕ ಸೇವಾ ಕೇಂದ್ರಗಳ ಮೂಲಕ ಮಹಿಳಾ ರೇಷ್ಮೆ ಬೆಳೆಗಾರರಿಗೆ ಮಾಹಿತಿಯನ್ನು ಪೂರೈಸಲಾಗುವುದು.

## 4(1)(ಬಿ)(xvi) ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಪದನಾಮ ಮತ್ತು ಇತರೆ ವಿವರಣೆಗಳು

ಕೇಂದ್ರ ಮಾಹಿತಿ ಹಕ್ಕು ಅಧಿನಿಯಮ 2005 ರ ಕಲಂ 5(1) 5(2) ಹಾಗೂ 19(1) ರಡಿ ಈ ಕಾರ್ಯಾಲಯದಲ್ಲಿ ಕೆಳಕಂಡ ಅಧಿಕಾರಿಯನ್ನು ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುವರು. ಸದರಿ ಅಧಿನಿಯಮದಡಿ ನಿಗದಿಪಡಿಸಲಾದಂತೆ ಸಾರ್ವಜನಿಕರಿಗೆ ಮಾಹಿತಿಯನ್ನು ಪೂರೈಸಲಾಗುವುದು.

| ಸಾರ್ವಜನಿಕ ಮಾಹಿತಿ ಅಧಿಕಾರಿಗಳು | ಕಾರ್ಯವ್ಯಾಪ್ತಿ |
|---|---|
| ರೇಷ್ಮೆ ಉಪನಿರ್ದೇಶಕರು<br>ಜಿಲ್ಲಾ ಪಂಚಾಯತ್, ಚಿತ್ರದುರ್ಗ.<br>ದೂರವಾಣಿ ಸಂಖ್ಯೆ: 08194-222816<br>ಇಮೆಲ್- dds.zp.cta@gmail.com | ಚಿತ್ರದುರ್ಗ ಜಿಲ್ಲೆಯ ವ್ಯಾಪ್ತಿಗೆ ಸಂಬಂಧಿಸಿದ ತಾಂತ್ರಿಕ ಮತ್ತು ಆಡಳಿತಾತ್ಮಕ ವಿಷಯಗಳು |

ರೇಷ್ಮೆ ಉಪ ನಿರ್ದೇಶಕರು
ಜಿಲ್ಲಾ ಪಂಚಾಯತ್, ಚಿತ್ರದುರ್ಗ